ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ

(ಜಿಲ್ಲಾ ನಗರಾಭಿವೃದ್ಧಿ ಕೋಶ)

ಸಂಖ್ಯೆ:ಜಿನಕೋ/ಸಿಬ್ಬಂದಿ-1/ 01/ಡಿ/2022-23 ದಿನಾಂಕ: 13.01.2023

-: ಅಧಿಸೂಚನೆ :-

ವಿಷಯ: ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಲ್ಲಿ ಲೋಡರ್ಸ್ / ಕ್ಲೀನರ್ಸ್ ನೇಮಕಾತಿ) (ವಿಶೇಷ) ನಿಯಮಗಳು-2021ರ ರೀತ್ಯಾ ನೇಮಕಾತಿ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ: ನಅಇ: 150:ಟಿಎಂಎಸ್: 2017, ದಿನಾಂಕ: 04.02.2022 ಮತ್ತು ತಿದ್ದುಪಡಿ ಆದೇಶ ದಿನಾಂಕ: 19.02.2022.
2. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಪತ್ರ ಸಂಖ್ಯೆ: 25361 ಡಿಎಂಎ 20 ಡಿಜಿಆರ್‌ಪಿ 2018-19 ದಿನಾಂಕ: 18.03.2022 ಮತ್ತು ದಿನಾಂಕ: 08.07.2022.
3. ಸರ್ಕಾರದ ಆದೇಶ ಸಂಖ್ಯೆ: ಸಿ.ಆ.ಸು.ಇ / 01 / ಸಹಿಮ / 2022 ದಿನಾಂಕ: 28.12.2022.

ಕಲಬುರಗಿ ಜಿಲ್ಲೆಯ **ಚಿಂಚೋಳಿ ಪುರಸಭೆಯಲ್ಲಿ** ಖಾಲಿ ಇರುವ **"ಲೋಡರ್ಸ್ / ಕ್ಲೀನರ್ಸ್"** ಹುದ್ದೆಗಳಿಗೆ ಉಲ್ಲೇಖ (1) ರಿಂದ (3)ರ ವರೆಗಿನ ನಿರ್ದೇಶನಗಳನ್ವಯ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು **ಚಿಂಚೋಳಿ ಪುರಸಭೆಯಲ್ಲಿ** ಲೋಡರ್ಸ್ / ಕ್ಲೀನರ್ಸ್‌ರಾಗಿ ಕ್ಷೇಮಾಭಿವೃದ್ಧಿ/ ದಿನಗೂಲಿ/ ಗುತ್ತಿಗೆ/ ಹೊರಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನ/ ಇತರೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರಬೇಕು. ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಯ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿ ಅರ್ಜಿಯ ಜೊತೆಗೆ ಕಾರ್ಯನಿರ್ವಹಿಸುತ್ತಿರುವುದಕ್ಕೆ ಆದೇಶ ಪ್ರತಿ / ಇ.ಎಸ್.ಐ ಮತ್ತು ಪಿ.ಎಫ್ ಕಟಾವಣೆ ದಾಖಲೆ, ಜನ್ಮದಿನಾಂಕಕ್ಕೆ ವಿದ್ಯಾಭ್ಯಾಸದ ಅಥವಾ ಆಧಾರದ ಕಾರ್ಡ, ಮತದಾರರ ಗುರುತಿನ ಚೀಟಿಯ (EPIC CARD) ಸೂಕ್ತ ದಾಖಲೆಗಳೊಂದಿಗೆ (ಮುಖ್ಯಾಧಿಕಾರಿಗಳಿಂದ ದೃಢೀಕರಿಸಿದ ಪ್ರತಿಗಳೊಂದಿಗೆ) ಅರ್ಜಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಕಲಬುರಗಿ ಹಾಗೂ ಲೋಡರ್ಸ್ / ಕ್ಲೀನರ್ಸ್ (ವಿಶೇಷ) ನೇರ ನೇಮಕಾತಿ ಪ್ರಾಧಿಕಾರಿ ಕಲಬುರಗಿ ಇವರ ಪರವಾಗಿ ಮುಖ್ಯಾಧಿಕಾರಿ ಪುರಸಭೆ **ಚಿಂಚೋಳಿ** ಇವರಿಗೆ ನಿಗಧಿತ ಅವಧಿಯೊಳಗೆ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 13.02.2023 ಸಾಯಂಕಾಲ 05.30 ಗಂಟೆಯವರೆಗೆ** ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮುಖ್ಯಾಧಿಕಾರಿ ಪುರಸಭೆ **ಚಿಂಚೋಳಿ** ಇವರನ್ನು ಅಥವಾ chincholitown.mrc.gov.in ಜಾಲತಾಣಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

**ಪುರಸಭೆ ಚಿಂಚೋಳಿ**

01) (ವಿಶೇಷ) ನೇರ ನೇಮಕಾತಿಗೆ ಲಭ್ಯ ಲೋಡರ್ಸ್ ಹುದ್ದೆಗಳ ಸಂಖ್ಯೆ 08

**ಹುದ್ದೆಗಳ ವರ್ಗೀಕರಣ ಪಟ್ಟಿ:**

| ಮೀಸಲಾತಿ ವರ್ಗ | ಇತರೆ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ ಅಭ್ಯರ್ಥಿ | ಅಂಗವಿಕಲ | ತೃ.ಲಿಂ | ಒಟ್ಟು |
|---|---|---|---|---|---|---|---|---|---|
| ಪ.ಜಾ | 01 | - | - | - | - | - | - | - | 01 |
| ಪ. ಪಂ | 01 | - | - | - | - | - | - | - | 01 |
| ಪ್ರವರ್ಗ - 1 | 01 | - | - | - | - | - | - | - | 01 |
| ಪ್ರವರ್ಗ - 2ಎ | 01 | - | - | - | - | - | - | - | 01 |
| ಪ್ರವರ್ಗ - 2ಬಿ | - | - | - | - | - | - | - | - | 00 |
| ಪ್ರವರ್ಗ -3ಎ | - | - | - | - | - | - | - | - | 00 |
| ಪ್ರವರ್ಗ -3ಬಿ | - | - | - | - | - | - | - | - | 00 |
| ಸಾಮಾನ್ಯ | 01 | 01 | 01 | - | - | 01 | - | - | 04 |
| ಒಟ್ಟು | 05 | 01 | 01 | 0 | 0 | 01 | 0 | 0 | 08 |

| ಹುದ್ದೆಯ ವಿವರ ಹಾಗೂ ವೇತನ ಶ್ರೇಣಿ | ಭರ್ತಿ ಮಾಡಬೇಕಾದ ನಗರಸಭೆ/ಪುರಸಭೆ ಹುದ್ದೆಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ/ಅರ್ಹತೆಗಳು |
|---|---|---|
| **ಹುದ್ದೆ:** ಲೋಡರ್ಸ್<br>**ವೇತನ ಶ್ರೇಣಿ;**<br>ರೂ: 17000–400–18600–450–20400–500–22400–550–24600–600–27000–650–28950 | **ಚಿಂಚೋಳಿ**<br>ಹುದ್ದೆಗಳ ಸಂಖ್ಯೆ: 08 | (1)ವಿದ್ಯಾರ್ಹತೆ ಅನ್ವಯಿಸುವುದಿಲ್ಲ<br>(2)ಕನ್ನಡ ಮಾತನಾಡಲು ಗೊತ್ತಿರಬೇಕು<br>(3)ಅರ್ಜಿಸಲ್ಲಿಸುವ ಅಭ್ಯರ್ಥಿಗಳು **ಚಿಂಚೋಳಿ** ಪುರಸಭೆಯಲ್ಲಿ ಲೋಡರ್ಸ್‌ರಾಗಿ ಕ್ಷೇಮಾಭಿವೃದ್ಧಿ/ ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ ಮತ್ತು ಇತರೆ ಆಧಾರದ ಮೇಲೆ 02 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿರಬೇಕು ಮತ್ತು ಲೋಡರ್ಸ್ / ಕ್ಲೀನರ್ಸ್ (ವಿಶೇಷ) ನೇಮಕಾತಿ ನಿಯಮಾವಳಿ ಜಾರಿಗೆ ಬಂದ ದಿನಾಂಕದಂದು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕು. |

02) (ವಿಶೇಷ) ನೇರ ನೇಮಕಾತಿಗೆ ಲಭ್ಯ ಕ್ಲೀನರ್ಸ್ ಹುದ್ದೆಗಳ ಸಂಖ್ಯೆ 02

<u>ಹುದ್ದೆಗಳ ವರ್ಗೀಕರಣ ಪಟ್ಟಿ :</u>

| ಮೀಸಲಾತಿ ವರ್ಗ | ಇತರೆ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ ಅಭ್ಯರ್ಥಿ | ಅಂಗವಿಕಲ | ತೃ.ಲಿಂ | ಒಟ್ಟು |
|---|---|---|---|---|---|---|---|---|---|
| ಪ.ಜಾ | 01 | – | – | – | – | – | – | – | 01 |
| ಪ. ಪಂ | – | – | – | – | – | – | – | – | 0 |
| ಪ್ರವರ್ಗ – 1 | – | – | – | – | – | – | – | – | 0 |
| ಪ್ರವರ್ಗ – 2ಎ | – | – | – | – | – | – | – | – | 0 |
| ಪ್ರವರ್ಗ – 2ಬಿ | – | – | – | – | – | – | – | – | 0 |
| ಪ್ರವರ್ಗ –3ಎ | – | – | – | – | – | – | – | – | 0 |
| ಪ್ರವರ್ಗ –3ಬಿ | – | – | – | – | – | – | – | – | 0 |
| ಸಾಮಾನ್ಯ | 01 | – | – | – | – | – | – | – | 01 |
| ಒಟ್ಟು | 02 | 0 | 0 | 0 | 0 | 0 | 0 | 0 | 02 |

| ಹುದ್ದೆಯ ವಿವರ ಹಾಗೂ ವೇತನ ಶ್ರೇಣಿ | ಭರ್ತಿ ಮಾಡಬೇಕಾದ ನಗರಸಭೆ/ಪುರಸಭೆ ಹುದ್ದೆಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ/ಅರ್ಹತೆಗಳು |
|---|---|---|
| **ಹುದ್ದೆ:** ಕ್ಲೀನರ್ಸ್<br>**ವೇತನ ಶ್ರೇಣಿ;**<br>ರೂ: 17000–400–18600–450–20400–500–22400–550–24600–600–27000–650–28950 | **ಚಿಂಚೋಳಿ**<br>ಹುದ್ದೆಗಳ ಸಂಖ್ಯೆ: 02 | (1)ವಿದ್ಯಾರ್ಹತೆ ಅನ್ವಯಿಸುವುದಿಲ್ಲ<br>(2)ಕನ್ನಡ ಮಾತನಾಡಲು ಗೊತ್ತಿರಬೇಕು<br>(3)ಅರ್ಜಿಸಲ್ಲಿಸುವ ಅಭ್ಯರ್ಥಿಗಳು **ಚಿಂಚೋಳಿ** ಪುರಸಭೆಯಲ್ಲಿ ಕ್ಲೀನರ್ಸ್ ಆಗಿ ಕ್ಷೇಮಾಭಿವೃದ್ಧಿ/ ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ ಮತ್ತು ಇತರೆ ಆಧಾರದ ಮೇಲೆ 02 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿರಬೇಕು ಮತ್ತು ಲೋಡರ್ಸ್ / ಕ್ಲೀನರ್ಸ್ (ವಿಶೇಷ) ನೇಮಕಾತಿ ನಿಯಮಾವಳಿ ಜಾರಿಗೆ ಬಂದ ದಿನಾಂಕದಂದು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕು. |

ನೇಮಕಾತಿ ವಿಧಾನ :-

ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿನ ಲೋಡರ್ಸ್ / ಕ್ಲೀನರ್ಸ್ ನೇಮಕಾತಿ (ವಿಶೇಷ) ನಿಯಮಗಳು 2021ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನಗಳನ್ವಯ ಲೋಡರ್ಸ್ / ಕ್ಲೀನರ್ಸ್‌ಗಳ (ವಿಶೇಷ) ನೇರ ನೇಮಕಾತಿಯನ್ನು ಮಾಡಲಾಗುವುದು.

1. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಆಯಾ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯನ್ನೆ ಹೊಂದಿರತಕ್ಕದ್ದು ಬೇರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರತ ಅಭ್ಯರ್ಥಿಗಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಚಿಂಚೋಳಿ ಪುರಸಭೆಯಲ್ಲಿ ಲೋಡರ್ಸ್ / ಕ್ಲೀನರ್ಸ್‌ರಾಗಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ /ಹೊರಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಇತರೆ ಆಧಾರದ ಮೇಲೆ ನೇಮಕಾತಿ ಹೊಂದಿ ಕನಿಷ್ಠ 02 ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿರಬೇಕು ಮತ್ತು ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರಬೇಕು.
3. ಕ್ಷೇಮಾಭಿವೃದ್ಧಿ ಅಂದರೆ, ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ರೀತ್ಯಾ, ರಾಜ್ಯದ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ / ಕ್ಲೀನರ್ಸ್.
4. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಗರಿಷ್ಠ ವಯೋಮಿತಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 55 ವರ್ಷಗಳು ಮೀರಕೂಡದು.
5. ಅಭ್ಯರ್ಥಿಯ ವಯಸ್ಸನ್ನು ಶೈಕ್ಷಣಿಕ / ವಿದ್ಯಾರ್ಹತೆ ದಾಖಲಾತಿಗಳು / ಆಧಾರ್ ಕಾರ್ಡ /ಜನನ ಪ್ರಮಾಣ ಪತ್ರ/ಪಡಿತರ ಚೀಟಿ / ಮತದಾರರ ಗುರುತಿನ ಚೀಟಿಯ (EPIC CARD) ದಾಖಲಾತಿಗಳನ್ನು ಆಧರಿಸಿ ನಿರ್ಧರಿಸಲಾಗುವುದು.
6. ಸಂಬಂಧಿಸಿದ ಪುರಸಭೆಯಲ್ಲಿ ಹಾಲಿ ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ 02 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಸಹ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್ / ಕ್ಲೀನರ್ಸ್‌ಗೆ ಆದ್ಯತೆ ನೀಡಲಾಗುವುದು
7. ನೇಮಕಾತಿಯಲ್ಲಿನ ಆದ್ಯತೆಯನ್ನು ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ/ ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ / ಕ್ಲೀನರ್ಸ್‌ರನ್ನು ಅನುಕ್ರಮವಾಗಿ ಪರಿಗಣಿಸಲಾಗುವುದು.
8. ಕಡಿಮೆ ವರ್ಷ ಸೇವೆ ಸಲ್ಲಿಸಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು.
9. ಹೊರಗುತ್ತಿಗೆ ಲೋಡರ್ಸ್ / ಕ್ಲೀನರ್ಸ್‌ಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 02 ವರ್ಷಗಳ ದಾಖಲಾತಿಗಳ ಕಡ್ಡಾಯವಾಗಿದ್ದು ಅರ್ಜಿಯೊಂದಿಗೆ ಆಯಾ ಪೌರಾಯುಕ್ತರು/ಮುಖ್ಯಾಧಿಕಾರಿಯಿಂದ ಸದರಿ ದಾಖಲೆಗಳನ್ನು ದೃಢೀಕರಿಸಿ ಕಡ್ಡಾಯವಾಗಿ ಲಗತ್ತಿಸುವುದು.
10. ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ/ ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ / ಕ್ಲೀನರ್ 02 ವರ್ಷಗಳ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಲೋಡರ್ಸ್ / ಕ್ಲೀನರ್ಸ್‌ಗಳ (ವಿಶೇಷ) ನೇಮಕಾತಿ ನಿಯಮಾವಳಿಯಲ್ಲಿ 4(2)ರಲ್ಲಿ ವಿವರಿಸಿರುವಂತೆ ಸದರಿ (ವಿಶೇಷ) ನೇರ ನೇಮಕಾತಿಯಲ್ಲಿ ಆಧ್ಯತೆಗೆ ಪರಿಗಣಿಸಲಾಗುವುದು.
11. ಎರಡು ಮತ್ತು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು.
12. ಆಯ್ಕೆ ಉಪನಿಯಮ (2)ಕ್ಕೆ ಒಳಪಟ್ಟು ಸದರಿ ಉಪನಿಯಮ (5)ರಲ್ಲಿ ವಿವರಿಸಿರುವಂತೆ ಪ್ರತಿಯೊಂದು ಪ್ರವರ್ಗದ ಮೀಸಲಾತಿಗೆ (ಸಮತಲ ಮತ್ತು ಲಂಬವಾದ ಮೀಸಲಾತಿಗೆ) ಅನುಗುಣವಾಗಿ ಆಯ್ಕೆಯಾಗಬಹುದಾದ ಅಭ್ಯರ್ಥಿಗಳ ಶೇ 20% ಹೆಚ್ಚುವರಿ ಪಟ್ಟಿ ತಯಾರಿಸಲಾಗುವುದು.
13. ಉಪ ನಿಯಮ (2) ರಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ಅಭ್ಯರ್ಥಿಯ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಅಭ್ಯರ್ಥಿಯಾಗಿರುವ ಮತ್ತೊಬ್ಬ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.
14. ಉಪನಿಯಮ (2) ಮತ್ತು (5) ರಂತೆ ತಯಾರಿಸಲಾದ ಆಯ್ಕೆ ಪಟ್ಟಿಯನ್ನು ಆಯಾ ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು ಹಾಗೂ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟಿನಲ್ಲಿಯೂ ಪ್ರಚುರಪಡಿಸಲಾಗುವುದು.
15. ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯು ಗುರುತಿಸಲಾದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಆಯ್ಕೆ ಪಟ್ಟಿಯು ಪ್ರಕಟವಾದ ಒಂದು ವರ್ಷದ ಅವಧಿಯವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

16. ಅಭ್ಯರ್ಥಿಗಳ ನೇಮಕಾತಿಯನ್ನು ನಿಯಮ 4ರ ರೀತ್ಯಾ ಆಯ್ಕೆ ಪಟ್ಟಿಯಲ್ಲಿ ನಮೂದಿಸಲಾದ ಅಭ್ಯರ್ಥಿಗಳ ಹೆಸರು, ಅವರ ಹೆಸರಿನ ಮುಂದೆ ತೋರಿಸಲಾದ ಖಾಲಿ ಹುದ್ದೆಗಳಿಗನುಸಾರ ಎಲ್ಲಾ ರೀತಿಯಿಂದ ನೇಮಕಾತಿಗೆ ಅರ್ಹರಾಗಿದ್ದಾರೆ ಎಂಬುದನ್ನು ವಿಚಾರಣೆಯ ಮೂಲಕ ಖಚಿತಪಡಿಸಿಕೊಂಡು ಕ್ರಮ ಜರುಗಿಸಲಾಗುವುದು.
17. ನಿಯಮ 4ರ ಉಪನಿಯಮ 6ರಲ್ಲಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅವರ ನೇಮಕಾತಿ ಹಕ್ಕು ಎಂದು ಪರಿಭಾವಿಸತಕ್ಕದ್ದಲ್ಲ.
18. ಲೋಡರ್ಸ್ / ಕ್ಲೀನರ್ಸ್ (ವಿಶೇಷ) ನೇರ ನೇಮಕಾತಿಯು ಉಲ್ಲೇಖ (1) ರಿಂದ ಉಲ್ಲೇಖ (3)ರ ನಿರ್ದೇಶನ ಹಾಗೂ ಮೇಲಾಧಿಕಾರಿಗಳು ಕಾಲ-ಕಾಲಕ್ಕೆ ನೀಡುವ ಸೂಚನೆಗಳನ್ವಯ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವ ಷರತ್ತಿಗೆ ಒಳಪಟ್ಟಿರುತ್ತದೆ.
19. **ಅಭ್ಯರ್ಥಿಗಳು ಅಗತ್ಯ ದಾಖಲಾತಿ ಪರಿಶೀಲನೆಗೆ ಕರೆದಾಗ ಜಿಲ್ಲಾಧಿಕಾರಿಗಳ ಕಛೇರಿ ಕಲಬುರಗಿ ಇಲ್ಲಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.**

➢ **ಅರ್ಜಿ ಸಲ್ಲಿಸುವ ವಿಧಾನ :**

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಈ ಕಾರ್ಯಾಲಯದಿಂದ ಹಾಗೂ ಸಂಬಂಧಿಸಿದ ನಗರಸಭೆ / ಪುರಸಭೆಗಳಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿ ಸಹಿ ಮಾಡುವುದು (ಅಭ್ಯರ್ಥಿ ಭಾವಚಿತ್ರದ ಮೇಲೆ ಅರ್ಧಭಾಗ ಹಾಗೂ ಪುಟಭಾಗದಲ್ಲಿ ಅರ್ಧಭಾಗ ಬರುವಂತೆ) ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಅಭ್ಯರ್ಥಿ ಸಹಿ/ಹೆಬ್ಬೆಟ್ಟಿನ ಗುರುತು ಮಾಡುವುದು. ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಆಯಾ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಲೋಡರ್ಸ / ಕ್ಲೀನರ್ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಕಲಬುರಗಿ ಜಿಲ್ಲೆ ಇವರ ಪರವಾಗಿ ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರಿಗೆ ದಿನಾಂಕ 13-02-2023 ಸಂಜೆ 5-30 ಗಂಟೆಯೊಳಗೆ ತಲುಪುವಂತೆ ಸಲ್ಲಿಸುವುದು. ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ಅಭ್ಯರ್ಥಿಯು ತಾವು ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ತಪ್ಪದೇ ನಮೂದಿಸುವುದು. ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

➢ **ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು :**

1. ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸುವುದು-ಒಟ್ಟು : 04 [01 ಭಾವಚಿತ್ರವನ್ನು ಅರ್ಜಿಯೊಂದಿಗೆ ನಿಗದಿತ ಭಾಗದಲ್ಲಿ ಅಂಟಿಸುವುದು ಉಳಿದ 03 ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು]
2. ಜನ್ಮದಿನಾಂಕದ ದೃಢೀಕರಣಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ / ಜನನ ಪ್ರಮಾಣ ಪತ್ರ/ಆಧಾರದ ಕಾರ್ಡ/ ಮತದಾರರ ಗುರುತಿನ ಚೀಟಿ (EPIC CARD) [ಎಲ್ಲಾ ದಾಖಲೆಗಳು ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು / ಮುಖ್ಯಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು]
3. ಪುರಸಭೆಯಲ್ಲಿ ಹಾಲಿ ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ 02 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ದೃಢೀಕೃತ ದಾಖಲೆ (ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು).
4. ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಲೋಡರ್ಸ್/ಕ್ಲೀನರ್ಸ್‌ರಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸಂಬಂಧಿಸಿದ ಪೌರಾಯುಕ್ತರು/ ಮುಖ್ಯಾಧಿಕಾರಿಯಿಂದ ದಾಖಲೆ ಮತ್ತು ದೃಢೀಕರಣ ಪಡೆದು ಲಗತ್ತಿಸಿರಬೇಕು.
5. ಹೊರಗುತ್ತಿಗೆ ಲೋಡರ್ಸ್/ಕ್ಲೀನರ್ಸ್‌ಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 02 ವರ್ಷಗಳ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸುವುದು. (ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು).

6. ಕ್ಷೇಮಾಭಿವೃದ್ಧಿ / ದಿನಗೂಲಿ / ಗುತ್ತಿಗೆ /ಹೊರಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ / ಕ್ಲೀನರ್ಸ್ 02 ವರ್ಷಗಳ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಾವತಿಯಾದ ದಾಖಲಾತಿಗಳನ್ನು ದೃಢೀಕರಿಸಿ ಲಗತ್ತಿಸುವುದು. (ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು).

7. ಮೀಸಲಾತಿ ವರ್ಗಗಳಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ/ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ/ಅಂಗವಿಕಲ ಪ್ರಮಾಣ ಪತ್ರ/ಯೋಜನಾ ನಿರಾಶ್ರಿತ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ **ಪಡೆದು ಅರ್ಜಿಯೊಂದಿಗೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.** (ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು).

8. **ಅಭ್ಯರ್ಥಿ ಆಯಾ ನಗರ ಸ್ಥಳೀಯ ಸಂಸ್ಥೆಯಲ್ಲಿ 02 ವರ್ಷಗಳ ನಿರಂತರ ಸೇವೆ ಹೊಂದಿರುವ ಹಾಗೂ ಪ್ರಸ್ತುತ** ಲೋಡರ್ಸ್ / ಕ್ಲೀನರ್ಸ್‌ಗಳ (ವಿಶೇಷ) ನೇಮಕಾತಿ ಜಾರಿಗೆ ಬಂದ ದಿನಾಂಕಕ್ಕೆ ಕರ್ತವ್ಯ ನಿರತರಾಗಿರುವುದಕ್ಕೆ ನಿಗಧಿ ಪಡಿಸಿದ ಎಲ್ಲಾ ನಿಯಮಾವಳಿಗಳನ್ವಯ ಅರ್ಹರಾಗಿರುವುದಕ್ಕೆ ಆಯಾ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳೊಂದಿಗೆ ದೃಢೀಕರಣವನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

➢ **ವಿಶೇಷ ಸೂಚನೆಗಳು :-**

- ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರ (ಜಿಲ್ಲಾಧಿಕಾರಿಗಳು ಕಲಬುರಗಿ) ಇವರು ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅರ್ಜಿಯನ್ನು ಈ ಕಛೇರಿಯಿಂದ ಮಾರಾಟ ಮಾಡಲಾಗುವುದಿಲ್ಲ. ಅರ್ಜಿ ನಮೂನೆಯನ್ನು ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರಿಂದ ಪಡೆದುಕೊಂಡು ಸಲ್ಲಿಸುವುದು.
- ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದು ಲಗತ್ತಿಸಿರಬೇಕು **ಮತ್ತು ಕಡ್ಡಾಯವಾಗಿ** ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರಿಂದ ದೃಢೀಕರಿಸಿರಬೇಕು.
- ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಯ ಖಾಯಂ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯ ವಿಳಾಸ ಬದಲಾವಣೆಯಾದಲ್ಲಿ ತಕ್ಷಣವೇ ಈ ಕಛೇರಿಗೆ ಮಾಹಿತಿ ತಿಳಿಸಬೇಕು. ತಪ್ಪಿದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರು.
- ಈ ಅಧಿಸೂಚನೆಯು ಚಾಲ್ತಿಯಲ್ಲಿರುವ ಮತ್ತು ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಆದೇಶಗಳಿಗೆ ಮತ್ತು ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ.
- ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರು ಅರ್ಹ ಅಭ್ಯರ್ಥಿಗಳಿಂದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಯಾವುದೇ ಮಾಹಿತಿ ಲೋಪವಾಗದಂತೆ ಅರ್ಜಿಯು **(ಯಾವುದೇ ಕಾಲಂ ಖಾಲಿ ಇಲ್ಲದಂತೆ ಮತ್ತು ತಪ್ಪಾಗದಿರುವುದನ್ನು ಪರಿಶೀಲಿಸಿ)** ದೃಢೀಕರಣ ಹಾಗೂ 02 ವರ್ಷಗಳ ನಿರಂತರ ಸೇವೆ ಸಲ್ಲಿಸಿದ ವೇತನ ದಾಖಲೆ ಹಾಗೂ ಹೊರಗುತ್ತಿಗೆ ನೌಕರರಾಗಿದ್ದಲ್ಲಿ ಇ.ಎಸ್.ಐ ಮತ್ತು ಪಿ.ಎಫ್ ದಾಖಲೆಗಳನ್ನು ಕಡ್ಡಾಯವಾಗಿ / ತಪ್ಪದೇ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸುವುದು.
- ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರು ಕೊನೆಯ ದಿನಾಂಕದವರೆಗೆ ಅರ್ಹ ಅಭ್ಯರ್ಥಿಗಳಿಂದ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ವಹಿ ಹಾಗೂ ಪೂರಕ ತಖ್ತೆಯೊಂದಿಗೆ ದಿನಾಂಕ 16-02-2023 ರಂದು ಮುದ್ದಾಂ ಆಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರಗಿ ಇಲ್ಲಿ ತಪ್ಪದೇ ಸಲ್ಲಿಸುವುದು.
- ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕವು ಸಾರ್ವಜನಿಕ ರಜೆಯಾಗಿದ್ದರೆ / ರಜೆಯಾದರೆ ಮುಂದಿನ ಕಛೇರಿ ಕೆಲಸದ ದಿನ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ಎಂದು ತಿಳಿಯುವುದು.

ಈ ಮೇಲಿನ ಸೂಚನೆಗಳಿಗೆ ಅನುಸಾರವಾಗಿ ದಾಖಲೆಗಳನ್ನು ಒದಗಿಸಲು ತಪ್ಪಿದಲ್ಲಿ ಅಂತಹ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಅಭ್ಯರ್ಥಿಯು ನಕಲಿ ಅಭ್ಯರ್ಥಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತಾವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾದ ಪರಿಶೀಲನೆ ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಭಿಸಿರುವನೆಂದು ಕಂಡು ಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೇ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ಸಹ ರದ್ದುಪಡಿಸಲಾಗುವುದು.

ಸ್ಥಳ : ಕಲಬುರಗಿ
ದಿನಾಂಕ: 13 JAN 2023

ಅಧ್ಯಕ್ಷರು,
ಲೋಡರ್ಸ್ ಮತ್ತು ಕ್ಲೀನರ್ಸ್ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರಿ,
ಹಾಗೂ ಜಿಲ್ಲಾಧಿಕಾರಿಗಳು ಕಲಬುರಗಿ

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌದ ಬೆಂಗಳೂರು-01 ರವರ ಮಾಹಿತಿಗಾಗಿ.
2) ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಮಾಹಿತಿಗಾಗಿ.
3) ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ಇವರಿಗೆ ನೀಡುತ್ತಾ ಸದರಿ ಅಧಿಸೂಚನೆಯನ್ನು ನಗರ ಸ್ಥಳೀಯ ಸಂಸ್ಥೆಯ ಅಂತರ್ಜಾಲದಲ್ಲಿ / ಸೂಚನಾ ಫಲಕದಲ್ಲಿ ಹಾಗೂ ಸಾರ್ವಜನಿಕ 02 ಕನ್ನಡ ವೃತ್ತಪತ್ರಿಕೆಗಳಲ್ಲಿ ಸಾಕಷ್ಟು ಪ್ರಚುರಗೊಳಿಸಿ ಅದರ ಮಾಹಿತಿಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರಗಿಗೆ ಪೂರಕ ದಾಖಲೆಗಳೊಂದಿಗೆ ತಪ್ಪದೇ ಒದಗಿಸಲು ಸೂಚಿಸಿದೆ.
4) ಸಿನಿಯರ್ ಪ್ರೋಗ್ರಾಮರ್ / ನೊಡಲ್ ಅಧಿಕಾರಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರಗಿ ಇವರಿಗೆ ಅಂತರ್ಜಾಲದಲ್ಲಿ ಪ್ರಚುರಗೊಳಿಸಲು ತಿಳಿಸಿದೆ.
5) ಕಛೇರಿ ಕಡತಕ್ಕೆ.